# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22ನೇ ಸಾಲಿನಲ್ಲಿ ಘೋಷಣೆಯಾಗಿರುವ ಹುಟ್ಟಿನಿಂದಲೇ ಶ್ರವಣದೋಷವುಳ್ಳ ಮಕ್ಕಳ ತಾಯಂದಿರಿಗೆ ಪ್ರಾರಂಭಿಕ ಹಂತದಲ್ಲಿಯೇ ಅವರ ಮಗುವಿನ ಸಮಸ್ಯೆ ಮತ್ತು ಪರಿಹಾರದ ಬಗ್ಗೆ ಅರಿವು ಮೂಡಿಸಲು ತರಬೇತಿ ನೀಡುವ ಅವಶ್ಯಕತೆ ಇರುವುದರಿಂದ ನಾಲ್ಕು ವರ್ಷದೊಳಗಿನ ಶ್ರವಣದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ (Speech) ತರಬೇತಿ ನೀಡುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:** ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ಪತ್ರ ಸಂಖ್ಯೆ:ವಿಹಿನಿ/ಆವ್ಯಯೋ/ ಸಿ.14/39/2021-22/268, ದಿ:07.07.2021.

**ಪ್ರಸ್ತಾವನೆ:**

2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-134ರಲ್ಲಿ ಹುಟ್ಟಿನಿಂದಲೇ ಶ್ರವಣದೋಷವುಳ್ಳ ಮಕ್ಕಳ ತಾಯಂದಿರಿಗೆ ಪ್ರಾರಂಭಿಕ ಹಂತದಲ್ಲಿಯೇ ಅವರ ಮಗುವಿನ ಸಮಸ್ಯೆ ಮತ್ತು ಪರಿಹಾರದ ಬಗ್ಗೆ ಅರಿವು ಮೂಡಿಸಲು ತರಬೇತಿ ನೀಡುವ ಅವಶ್ಯಕತೆ ಇರುವುದರಿಂದ ನಾಲ್ಕು ವರ್ಷದೊಳಗಿನ ಶ್ರವಣದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ (Speech) ತರಬೇತಿ ನೀಡುವ ಯೋಜನೆಯನ್ನು ಘೋಷಿಸಲಾಗಿರುತ್ತದೆ

ಅದರಂತೆ, 4 ವರ್ಷದೊಳಗಿನ ಶ್ರವಣದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ (Speech) ತರಬೇತಿನ ನೀಡುವ ಯೋಜನೆಯನ್ನು ರಾಜ್ಯದಲ್ಲಿ ವಿಭಾಗವಾರು 2 ಜಿಲ್ಲೆಗಳಂತೆ ಬೆಂಗಳೂರು, ಬೆಳಗಾವಿ, ಕಲಬುರ್ಗಿ ಹಾಗೂ ಮೈಸೂರು ವಿಭಾಗಗಳಲ್ಲಿ ಒಟ್ಟು 8 ಜಿಲ್ಲೆಗಳಲ್ಲಿ ತರಬೇತಿ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಪೂರ್ಣ ಪ್ರಮಾಣದ ಪ್ರಸ್ತಾವನೆ, ಮಾರ್ಗಸೂಚಿ ಹಾಗೂ ತಡೆಪಟ್ಟಿಯನ್ನು ಸಿದ್ಧಪಡಿಸಿದ್ದು, ಈ ಯೋಜನೆಯ ಅನುಷ್ಠಾನಕ್ಕೆ 2021-22ನೇ ಸಾಲಿನಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ನಡೆಸಲ್ಪಡುವ ವಿಶೇಷ ಶಾಲೆಗಳಿಗೆ ಆರ್ಥಿಕ ನೆರವು ಯೋಜನೆಯ ಲೆಕ್ಕಶೀರ್ಷಿಕೆ:2235-02-104-2-06, ಉದ್ದೇಶಿತ ಲೆಕ್ಕಶೀರ್ಷಿಕೆ:103 ಸಹಾಯಾನುದಾನದಡಿ ಲಭ್ಯವಿರುವ ರೂ.4699.00 ಲಕ್ಷಗಳಲ್ಲಿ ಈ ಯೋಜನೆಗೆ ಅವಶ್ಯವಿರುವ ರೂ.320.00 ಲಕ್ಷಗಳ ವೆಚ್ಚದಲ್ಲಿ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶ ಹೊರಡಿಸುವಂತೆ ಕ್ರಿಯಾಯೋಜನೆಯೊಂದಿಗೆ ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಮಮಇ 152 ಪಿಹೆಚ್ ಪಿ 2021, ಬೆಂಗಳೂರು, ದಿ:17.09.2021**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-134ರಲ್ಲಿ ಹುಟ್ಟಿನಿಂದಲೇ ಶ್ರವಣದೋಷವುಳ್ಳ ಮಕ್ಕಳ ತಾಯಂದಿರಿಗೆ ಪ್ರಾರಂಭಿಕ ಹಂತದಲ್ಲಿಯೇ ಅವರ ಮಗುವಿನ ಸಮಸ್ಯೆ ಮತ್ತು ಪರಿಹಾರದ ಬಗ್ಗೆ ಅರಿವು ಮೂಡಿಸಲು ತರಬೇತಿ ನೀಡುವ ಅವಶ್ಯಕತೆ ಇರುವುದರಿಂದ 4 ವರ್ಷದೊಳಗಿನ ಶ್ರವಣದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ (Speech) ತರಬೇತಿ ನೀಡುವ ಯೋಜನೆಯನ್ನು ರಾಜ್ಯದಲ್ಲಿ ವಿಭಾಗವಾರು 2 ಜಿಲ್ಲೆಗಳಂತೆ ಬೆಂಗಳೂರು, ಬೆಳಗಾವಿ, ಕಲಬುರ್ಗಿ ಹಾಗೂ ಮೈಸೂರು ವಿಭಾಗಗಳಲ್ಲಿ ಒಟ್ಟು 8 ಜಿಲ್ಲೆಗಳಲ್ಲಿ

ತರಬೇತಿ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಹಾಗೂ 2021-22ನೇ ಸಾಲಿನಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ನಡೆಸಲ್ಪಡುವ ವಿಶೇಷ ಶಾಲೆಗಳಿಗೆ ಆರ್ಥಿಕ ನೆರವು ಯೋಜನೆಯ ಲೆಕ್ಕಶೀರ್ಷಿಕೆ:2235-02-104-2-06, ಉದ್ದೇಶಿತ ಲೆಕ್ಕಶೀರ್ಷಿಕೆ:103 ಸಹಾಯಾನುದಾನದಡಿ ಲಭ್ಯವಿರುವ ರೂ.4699.00 ಲಕ್ಷಗಳಲ್ಲಿ ಈ ಯೋಜನೆಗೆ ಅವಶ್ಯವಿರುವ ರೂ.320.00 ಲಕ್ಷಗಳ ವೆಚ್ಚದಲ್ಲಿ ಭರಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಯೋಜನೆಯನ್ನು ಮಾರ್ಗಸೂಚಿಯನ್ವಯ ನಿಯಮಾನುಸಾರವಾಗಿ ಮತ್ತು ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ. ಸದರಿ ಯೋಜನೆಗೆ ಸಂಬಂಧಿಸಿದಂತೆ ಸ್ವಯಂ ಸೇವಾ ಸಂಸ್ಥೆಗಳ ಆಯ್ಕೆ ಪ್ರಕ್ರಿಯೆಯನ್ನು ಇದರೊಂದಿಗೆ ಲಗತ್ತಿಸಿದೆ.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆಯ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 259 ವೆಚ್ಚ-10/2021, ದಿ:13.08.2021 ಹಾಗೂ ಪಿಡಿಎಸ್ 23 ಐಎಂಎಂ 2021, ದಿ:09.08.2021ರಲ್ಲಿನ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

G. H. Saroja
(ಜಿ. ಹೆಚ್. ಸರೋಜಮ್ಮ)
ಸರ್ಕಾರ ಅಧೀನ ಕಾರ್ಯದರ್ಶಿ-2 17/09/2021
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು- 1.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ವಿ.ವಿ.ಗೋಪುರ, ಪೋಡಿಯಂ ಬ್ಲಾಕ್, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-01.
6. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಅಪರ ಕಾರ್ಯದರ್ಶಿರವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10) ವಿಧಾನಸೌಧ, ಬೆಂಗಳೂರು.
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನ ಶಾಖ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಓ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

## ಸರ್ಕಾರಿ ಆದೇಶ ಸಂಖ್ಯೆ: WCD 152 PHP 2021 ದಿನಾಂಕ: 17.09.2021ಕ್ಕೆ ಮಾರ್ಗಸೂಚಿಗಳು

### ಯೋಜನೆಯ ವ್ಯಾಪ್ತಿ:

ರಾಜ್ಯದ 4 ವಿಭಾಗಗಳಲ್ಲಿ ವಿಭಾಗವಾರು 2 ರಂತೆ ಒಟ್ಟು 8 ವಸತಿ ರಹಿತ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಸ್ಥಾಪಿಸಲು ಘೋಷಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ರಾಜ್ಯದ 4 ವಿಭಾಗಗಳಲ್ಲಿ ವಿಭಾಗವಾರು 2 ರಂತೆ ಒಟ್ಟು 8 ವಸತಿ ರಹಿತ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಸ್ಥಾಪಿಸುವುದು.

### 1. ಉದ್ದೇಶ:

- ಶ್ರವಣದೋಷವುಳ್ಳ ಮಕ್ಕಳನ್ನು ಬೇಗ ಗುರುತಿಸಿ ಚಿಕಿತ್ಸೆ /ತರಬೇತಿ ನೀಡಿ ಅವರ ಮಾತಿನ ಬೆಳವಣಿಗೆಗೆ ಸಹಾಯ ಮಾಡುವುದು.
- ಶ್ರವಣದೋಷವುಳ್ಳ ಮಕ್ಕಳ ಶಿಕ್ಷಣವನ್ನು ಉತ್ತೇಜಿಸುವುದು.
- ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 16(iv) ರನ್ವಯ ಶ್ರವಣದೋಷವುಳ್ಳ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕ ವಾತಾವರಣ ಒದಗಿಸುವುದು.
- ಶ್ರವಣದೋಷವುಳ್ಳ ಅಂಗವಿಕಲರನ್ನು ಸಮಾಜದ ಮುಖ್ಯವಾಹಿನಿಗೆ ಬೆರೆಯಲು ಸಹಕಾರ ನೀಡುವುದು.
- ಶ್ರವಣದೋಷವುಳ್ಳ ವಿದ್ಯಾರ್ಥಿಗಳನ್ನು ಸ್ವಾವಲಂಬಿಯಾಗಿಸಿ ಎಲ್ಲಾ ಮಕ್ಕಳಂತೆ ಶಿಕ್ಷಣವನ್ನು ಮುಂದುವರೆಸಲು ಅನುವು ಮಾಡಿಕೊಡುವುದು.
- ಶ್ರವಣದೋಷವುಳ್ಳ ವಿದ್ಯಾರ್ಥಿಗಳು ಸಾಮಾನ್ಯ ಮಕ್ಕಳೊಂದಿಗೆ ವ್ಯಾಸಂಗ ಮಾಡುವಾಗ ಅವರಲ್ಲಿನ ಕೀಳರಿಮೆ ಹೋಗಲಾಡಿಸಿ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವುದು.

### 2.ಅನುದಾನ ಪಡೆಯಲು ಸಂಸ್ಥೆಯ ಅರ್ಹತೆ:

- ಸ್ವಯಂಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೋಂದಣಿಯಾಗಿರುವ ಚಾರಿಟೇಬಲ್ ಟ್ರಸ್ಟ್ ಸೊಸೈಟಿಯಾಗಿರಬೇಕು.
- ಸ್ವಯಂಸೇವಾ ಸಂಸ್ಥೆಯು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 50, 51ರ ಪ್ರಕಾರ ನೋಂದಣಿಯಾಗಿಬೇಕು.
- ಸ್ವಯಂಸೇವಾ ಸಂಸ್ಥೆಯು ಶ್ರವಣದೋಷ ಮಕ್ಕಳ ಸೇವಾ ಕೇತ್ರದಲ್ಲಿ ಕನಿಷ್ಠ 10 ವರ್ಷದ ಅನುಭವ ಇರಬೇಕು.
- ಶ್ರವಣದೋಷ ಮಕ್ಕಳ ಸೇವಾ ಕೇತ್ರದಲ್ಲಿ ಅನುಭವ ಹಾಗು ತಾಂತ್ರಿಕ ಸೇವಾ ಸೌಲಭ್ಯವಿರುವಂತಹ ತರಬೇತಿ ನೀಡಲು ಶಕ್ತವಾದಂತಹ, ಸ್ವಯಂ ಸೇವಾ ಸಂಸ್ಥೆಗಳು ಅರ್ಹವಾಗಿರುತ್ತವೆ.
- ಇಲಾಖೆಯಿಂದ ಈಗಾಗಲೇ ಶ್ರವಣ ದೋಷವುಳ್ಳ ಮಕ್ಕಳಿಗೆ ವಿಶೇಷ ಶಿಕ್ಷಣ ನೀಡಲು ಅನುಮತಿ ಪಡೆದಂತಹ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದಾಗಿದೆ.

3.ಸಹಾಯಧನ ಪಡೆಯಲು ಷರತ್ತುಗಳು:

- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅನುಮತಿ ಪಡೆದಂತಹ ಸಂಸ್ಥೆಗೆ ಮಾತ್ರವೇ ಸಹಾಯಧನ ನೀಡಲಾಗುವುದು.
- ಸಂಸ್ಥೆಯು ಮಕ್ಕಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆ ಮುಂತಾದವುಗಳನ್ನು ಸ್ವೀಕರಿಸತಕ್ಕದ್ದಲ್ಲ
- ಸಹಾಯಧನವು ಆಯವ್ಯಯ ಲಭ್ಯತೆಗೆ ಒಳಪಟ್ಟಿರುತ್ತದೆ ಹಾಗೂ ತನ್ನ ಸ್ವಂತ ಹಕ್ಕೆಂದು ಕ್ಲೇಮ್ ಮಾಡುವಂತಿಲ್ಲ.
- ಈ ತರಬೇತಿ ಕೇಂದ್ರಕ್ಕೆ ನಾಲ್ಕು ವರ್ಷದೊಳಗಿನ 25 ಶ್ರವಣ ದೋಷವುಳ್ಳ ಮಕ್ಕಳನ್ನು ಅವರ ತಾಯಂದಿರ ಸಹಿತ ದಾಖಲಿಸಿರಬೇಕು. (25+25=50).15ಕ್ಕಿಂತ ಕಡಿಮೆ ಮಕ್ಕಳಿದ್ದಲ್ಲಿ, ಹಾಗೂ ಎಲ್ಲಾ ಮಕ್ಕಳ ತಾಯಂದಿರನ್ನು ದಾಖಲಿಸದಿದ್ದಲ್ಲಿ ಸಂಸ್ಥೆಯು ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
- ಈ ತರಬೇತಿ ಕೇಂದ್ರಕ್ಕೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಿಂದ ಬಂದಂತಹ ಮಕ್ಕಳನ್ನು ಹಾಗೂ ಅವರ ತಾಯಂದಿರನ್ನು ಮಾತ್ರ ಫಲಾನುಭವಿಗಳೆಂದು ಪರಿಗಣಿಸಿ ಅನುದಾನಕ್ಕೆ ಪರಿಗಣಿಸಲಾಗುತ್ತದೆ.
- ತರಬೇತಿ ಕೇಂದ್ರವು 225 ದಿನಗಳಿಗೆ ಕಡಿಮೆ ಇರದಂತೆ ಕಾರ್ಯನಿರ್ವಹಿಸಬೇಕು.
- ತರಬೇತಿ ಕೇಂದ್ರಕ್ಕೆ ಅಗತ್ಯವಾದ ಪೀಠೋಪಕರಣಗಳು, ಪಾಠೋಪಕರಣಗಳು, ಗ್ರಂಥಾಲಯ ಇತ್ಯಾದಿಗಳಿರಬೇಕು.
- ಸಂಸ್ಥೆಯು ಸಹಾಯಧನದ ಲೆಕ್ಕ ಪತ್ರಗಳನ್ನು ಪ್ರತ್ಯೇಕವಾಗಿ ಹಾಗೂ ಸರಿಯಾಗಿ ನಿರ್ವಹಿಸಿ ಅಗತ್ಯವೆನಿಸಿದಾಗ ತನಿಖೆಗೆ ನೀಡಬೇಕು.
- ಸಹಾಯಧನ ಪಡೆಯುವ ಸಂಸ್ಥೆಯು ಸರ್ಕಾರದ ಅಧಿಕಾರಿಗಳು ಅಥವಾ ಇಲಾಖೆಯಿಂದ ನೇಮಿಸಲ್ಪಟ್ಟ ಯಾವುದೇ ವ್ಯಕ್ತಿಗಳು/ಸಂಸ್ಥೆಗಳ ತಪಾಸಣೆಗೆ ಸಿದ್ಧವಾಗಿರಬೇಕು.
- ಮಂಜೂರು ಮಾಡಿದ ಸಹಾಯಧನವನ್ನು ಅನುಮೋದಿಸಲ್ಪಟ ಕಾರ್ಯಕ್ಕೆ, ವಿನಿಯೋಗಿಸಬೇಕು. ವಿನಿಯೋಗಿಸದೇ ಇರುವುದು ಕಂಡು ಬಂದಲ್ಲಿ ಮುಂದೆ ಸಹಾಯಧನ ನಿಲ್ಲಿಸುವುದಲ್ಲದೆ ಈ ಹಿಂದೆ ನೀಡಿದ ಸಹಾಯಧನವನ್ನು ಸಹಾ ವಸೂಲಿ ಮಾಡಲಾಗುವುದು.
- ಸಂಸ್ಥೆಯು ಯಾವುದೇ ಜಾತಿ ಮತ ಪರಿಗಣಿಸದೇ ಎಲ್ಲಾ ಜಾತಿಯ ಮಕ್ಕಳಿಗೂ ಮುಕ್ತ ವಾಗಿರಬೇಕು.
- ಸಂಸ್ಥೆಗೆ ಅನುದಾನ ಮಂಜೂರಾಗದೇ ಇದ್ದಲ್ಲಿ ಯಾವುದೇ ಕಾರಣಕ್ಕೂ ತರಬೇತಿ ಕೇಂದ್ರವನ್ನು ಮುಚ್ಚತಕ್ಕದ್ದಲ್ಲ. ಅಂತಹ ಸಂದರ್ಭದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲಗಳಿಂದಲೇ ನಡೆಸತಕ್ಕದ್ದು.
- ಸಹಾಯಧನದಿಂದ ಸಂಪೂರ್ಣವಾಗಿ ಅಥವಾ ಭಾಗಶ: ಖರೀದಿಸಿದ ಎಲ್ಲಾ ರೀತಿಯ ಆಸ್ತಿಗಳ ಲೆಕ್ಕಪತ್ರಗಳನ್ನು ಸಂಸ್ಥೆಯು ಸರಿಯಾಗಿ ನಿರ್ವಹಿಸತಕ್ಕದ್ದು. ಇಂತಹ ಆಸ್ತಿಗಳನ್ನು ಸರ್ಕಾರದ ಪೂರ್ವಾನುಮತಿಯಿಲ್ಲದೆ ಪರಭಾರೆ ಮಾಡುವುದಾಗಲೀ ಅತಿಕ್ರಮವಾಗಿ ನಡೆದುಕೊಳ್ಳುವುದಾಗಲೀ ಮಾಡಕೂಡದು. ಯಾವುದೇ ಸಂದರ್ಭದಲ್ಲಿ ಸಂಸ್ಥೆಯು ಮುಚ್ಚಿದಲ್ಲಿ ಅಂತಹ ಆಸ್ತಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
- ಸಹಾಯದನವನ್ನು ಪಡೆಯಲು ಸಂಸ್ಥೆಗಳು ಅರ್ಜಿಗಳನ್ನು ಜಿಲ್ಲಾಮಟ್ಟದಲ್ಲಿ ಶಿಶು ಕೇಂದ್ರೀಕೃತ ಯೋಜನೆಯಡಿ ಈಗಾಗಲೇ ರಚಿತವಾಗಿರುವ ಮುಖ್ಯ

ಕಾರ್ಯನಿರ್ವಾಹಣಾಧಿಕಾರಿಗಳ ನೇತೃತ್ವದಲ್ಲಿ ರಚಿಸಲಾದ ಸಮಿತಿಯ ಮುಖಾಂತರ ಅನುಮೋದನೆ ಪಡೆದು ಸ್ಪಷ್ಟ ಶಿಫಾರಸ್ಸಿನೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

- ಜಿಲ್ಲಾ ಸಮಿತಿಯಿಂದ ಸ್ವೀಕೃತಗೊಂಡಂತಹ ಪ್ರಸ್ತಾವನೆಗಳನ್ನು ಶಿಶು ಕೇಂದ್ರೀಕೃತ ಯೋಜನೆಯಡಿ ರಾಜ್ಯಮಟ್ಟದಲ್ಲಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮಿತಿಯ ಸದಸ್ಯರ ಜೊತೆಗೆ, ಇಲ್ಲಿ ತಿಳಿಸಿರುವ ಯಾವುದಾದರೂ ಒಂದು ಸಂಸ್ಥೆಯ (ಸರ್ಕಾರದ ವೈದ್ಯಕೀಯ ಕಾಲೇಜ್/ ವಿಕ್ಟೋರಿಯಾ/ ಬೋರಿಂಗ್/ ವೆಂಕಟೇಶ್ವರ ಕಿವಿ, ಮೂಗು ಮತ್ತು ಗಂಟಲಿನ ಸರ್ಕಾರಿ ಆಸ್ಪತ್ರೆಯ) ಓರ್ವ ವಾಕ್ ಮತ್ತು ಶ್ರವಣ ತಜ್ಞರನ್ನು ನಿರ್ದೇಶಕರು ಸೇರಿಸಕೊಂಡು ಈ ಸಮಿತಿಯ ಮೂಲಕ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸಿ, ತದನಂತರ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಅನುಮೋದನೆಗೆ ಸಲ್ಲಿಸುವುದು
- ಸಹಾಯಧನ ಮಂಜೂರಾತಿಯು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಅಂತಿಮ ತೀರ್ಮಾನಕ್ಕೊಳಪಟ್ಟಿರುತ್ತದೆ.
- 2021-22ನೇ ನೇ ಸಾಲಿನಲ್ಲಿ ಈ ಯೋಜನೆಯನ್ನು ರಾಜ್ಯದಲ್ಲಿ ವಿಭಾಗವಾರು ಒಟ್ಟು 8 ಜಿಲ್ಲೆಗಳಲ್ಲಿ ನಿಯಮಾನುಸಾರ ಆಯ್ಕೆಗೊಂಡ ಸ್ವಯಂ ಸೇವಾ ಸಂಸ್ಥೆಗಳಿಗೆ ಮಾತ್ರ ಧನ ಸಹಾಯ ನೀಡಲಾಗುವುದು. ಪ್ರಸ್ತಾಪಿತ ಜಿಲ್ಲೆಗಳಿಗೆ ಒಂದು ಕೇಂದ್ರ ಪ್ರಾರಂಭಿಸಲು ಮಾತ್ರ ಅವಕಾಶವಿರುತ್ತದೆ.
- ಜಿಲ್ಲಾ ಸಮಿತಿಯಲ್ಲಿ ಪರಾಮರ್ಶಿಸಿ ಅರ್ಹವಾದ 1 ಸಂಸ್ಥೆಯನ್ನು ಸಹಾಯಧನ ಮಂಜೂರಾತಿಗೆ ಶಿಫಾರಸ್ಸು ಮಾಡುವುದು. ಜಿಲ್ಲೆಗೆ ಒಂದು ಕೇಂದ್ರಕ್ಕೆ ಮಾತ್ರ ಅವಕಾಶವಿರುತ್ತದೆ.

**4. <u>ಸಂಸ್ಥೆಯು ಸಹಾಯಧನ ಪ್ರಸ್ತಾವನೆಯನ್ನು ಸಲ್ಲಿಸುವಾಗ ಈ ಕೆಳಕಂಡಂತೆ ಪ್ರಮಾಣೀ ಕರಿಸಿರಬೇಕು.</u>**

- ಸಂಸ್ಥೆಯ ಆಡಳಿತ ಮತ್ತು ಆರ್ಥಿಕ ಸುಸ್ಥಿತಿಯ ಬಗ್ಗೆ ಪ್ರಮಾಣೀಕರಿಸಿರಬೇಕು.
- ಸಹಾಯಧನವನ್ನು ಬಿ.ಇಡಿ (ಹೆಚ್‌ಐ) ಕೋರ್ಸ್ನ ಕಾರ್ಯಕ್ರಮಕ್ಕೆ ಮಾತ್ರ ಉಪಯೋಗಿಸುತ್ತೇವೆಂದು ಪ್ರಮಾಣೀಕರಿಸಬೇಕು.
- ಸಹಾಯಧನ ದುರುಪಯೋಗವಾದ ಬಗ್ಗೆ, ಆಗಲಿ ಅಥವಾ ಸರ್ಕಾರದ ಸೂಚನೆಗಳನ್ನು / ನಿರ್ದೇಶಕರು ನೀಡುವ ಸೂಚನೆಗಳನ್ನು ಪಾಲಿಸದೇ ಇರುವುದು ಕಂಡು ಬಂದಲ್ಲಿ ತೆಗೆದು ಕೊಂಡ ಸಹಾಯಧನ ಹಿಂದಿರುಗಿಸಲು ಸಿದ್ಧರಿರುವುದಾಗಿ ಪ್ರಮಾಣೀಕರಿಸಿರಬೇಕು.
- ಅನುದಾನವು ಮೇಲ್ಕಂಡ ಅಂಶಗಳನುಸಾರ ಮಕ್ಕಳ ಸಂಖ್ಯೆಯನ್ನಾಧರಿಸಿ ಬಿಡುಗಡೆ ಮಾಡಲಾಗುವುದು. ಸಂಸ್ಥೆಗೆ ಬಿಡುಗಡೆ ಆಗುವ ಅನುದಾನಕ್ಕಿಂತ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲದಿಂದಲೇ ಭರಿಸಬೇಕು.
- ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವುದಾಗಿ ಹಾಗೂ ಯಾವುದೇ ಕಾರಣಕ್ಕೂ ನೀಡುವ ತರಬೇತಿಯ ಗುಣಮಟ್ಟ, ಸೇವೆ ಸೌಲಭ್ಯಗಳನ್ನು ಕಡಿಮೆ ಮಾಡುವುದಿಲ್ಲವೆಂಬುದಾಗಿ ಪ್ರಮಾಣೀಕರಿಸಬೇಕು.

**5. <u>ಅರ್ಜಿ ಸಲ್ಲಿಸುವ ವಿಧಾನ:</u>** ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು.(ಅನುಬಂಧ-2)ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ "2235-02-101-0-99" ಸಹಾಯಾನುದಾನದಡಿ ಭರಿಸಲಾಗುವುದು.

## 6. ಸಂಸ್ಥೆಗಳನ್ನು ರಾಜ್ಯ ಸಹಾಯಧನದಡಿ ಸೇರ್ಪಡೆ ಮಾಡುವ ವಿಧಾನ

ಯೋಜನೆಯಾನುಸಾರ ವಿಭಾಗವಾರು 2 (ಎರಡು) ಜಿಲ್ಲೆಗಳಂತೆ ಒಟ್ಟು 8 ಜಿಲ್ಲೆಗಳಲ್ಲಿ, ಜಿಲ್ಲೆಗೆ ಒಂದರಂತೆ ಕೇಂದ್ರಗಳನ್ನು ಸ್ವಯಂಸೇವಾ ಸಂಸ್ಥೆಯ ಮೂಲಕ ನಡೆಸಲು ಮಂಜೂರು ಮಾಡಬಹುದಾಗಿದೆ. ಈ ಜಿಲ್ಲೆಗಳಲ್ಲಿ ಸಂಸ್ಥೆಯನ್ನು ಆಯ್ಕೆ ಮಾಡುವ ಸಂಬಂಧ ಜಿಲ್ಲಾಮಟ್ಟದಲ್ಲಿ ಪ್ರಕಟಣೆ ಹೊರಡಿಸಿ ಪ್ರಸ್ತಾವನೆಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ರಚಿತವಾಗಿರುವ ಸಮಿತಿಯಲ್ಲಿ ಪರಾಮರ್ಶಿಸಿ ಅರ್ಹವಾದ ಸಂಸ್ಥೆಯನ್ನು ಸಹಾಯಧನ ಮಂಜೂರಾತಿಗೆ ಶಿಫಾರಸ್ಸು ಮಾಡುವುದು.

ಜಿಲ್ಲಾ ಸಮಿತಿಯಿಂದ ಸ್ವೀಕೃತಗೊಂಡಂತಹ ಪ್ರಸ್ತಾವನೆಗಳನ್ನು ಶಿಶು ಕೇಂದ್ರೀಕೃತ ಯೋಜನೆಯಡಿ ರಚಿತವಾಗಿರುವ ಸಮಿತಿಗೆ ಸರ್ಕಾರದ ವೈದ್ಯಕೀಯ ಕಾಲೇಜ್/ ವಿಕ್ಟೋರಿಯಾ /ಬೋರಿಂಗ್/ವೆಂಕಟೇಶ್ವರ ಸರ್ಕಾರಿ ಆಸ್ಪತ್ರೆಯ) ಓರ್ವ ವಾಕ್ ಮತ್ತು ಶ್ರವಣ ತಜ್ಞರನ್ನು ಸದಸ್ಯರನ್ನಾಗಿ ಸೇರಿಸಿಕೊಂಡು ಈ ಸಮಿತಿಯ ಮೂಲಕ ಜಿಲ್ಲೆಗಳಿಂದ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸಿ ತದನಂತರ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಅನುಮೋದನೆಗೆ ಸಲ್ಲಿಸುವುದು.

## 7.ಆರ್ಥಿಕ ಧನಸಹಾಯ:

4 ವರ್ಷದೊಳಗಿನ ಶ್ರವಣದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ ತರಬೇತಿ ಕೇಂದ್ರದಲ್ಲಿ 25 ಮಕ್ಕಳನ್ನು ಒಂದು ಯೂನಿಟ್ ಎಂದು ಪರಿಗಣಿಸಿದೆ. ಅದರಂತೆ ಪ್ರಾರಂಭಿಕ ವರ್ಷದಲ್ಲಿ ಒಂದು ಕೇಂದ್ರಕ್ಕೆ (25 ಮಕ್ಕಳಿಗೆ) ವಾರ್ಷಿಕ ರೂ 40.00 ಲಕ್ಷ ಆಯವ್ಯಯ(ಆವರ್ತಕ ವೆಚ್ಚ=ರೂ.35,00,000 ಮತ್ತು ಒಂದು ಬಾರಿಗೆ ಅನಾವರ್ತಕ ವೆಚ್ಚ=ರೂ.5,00,000 ಲಕ್ಷ ಸೇರಿ ಒಟ್ಟು ರೂ.40,00,000ಲಕ್ಷ) ಕ್ಕೆ ಅವಕಾಶ ಮಾಡಿಕೊಡಲಾಗಿದೆ. ಆಯವ್ಯಯದ ವಿವರವನ್ನು ಅನುಬಂಧ-01 ರಲ್ಲಿ ನೀಡಲಾಗಿದೆ. ಉಳಿದಂತೆ ಮುಂದಿನ ವರ್ಷಗಳಲ್ಲಿ ತರಬೇತಿ ಕೇಂದ್ರದ ವಾರ್ಷಿಕ ನಿರ್ವಹಣೆಗಾಗಿ ಅನುಬಂಧ-01 ರಲ್ಲಿ ವಿವರಿಸಿರುವಂತೆ ರೂ.35,00,000 ಲಕ್ಷದಷ್ಟು ಆಯವ್ಯಯ ನೀಡಲಾಗುವುದು.

## 8.ಮಂಜೂರಾತಿ ಪ್ರಾಧಿಕಾರ:

- ಸಹಾಯಧನ ಮಂಜೂರಾತಿ ಪ್ರಾಧಿಕಾರವು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಸರ್ಕಾರದ ವಿವೇಚನಾಧಿಕಾರದಲ್ಲಿ ಸಹಾಯಧನವನ್ನು ಮಂಜೂರು ಮಾಡಲಾಗುವುದು.
- ಸಹಾಯಧನವನ್ನು ಅನುಬಂಧ-1 ರಲ್ಲಿ ತಿಳಿಸಿರುವ ಐಟಂವಾರಿನಂತೆ ಆಧರಿಸಿ ಹಾಗೂ ಫಲಾನುಭವಿಗಳ ದಾಖಾಲಾತಿ ಸಂಖ್ಯೆಯನ್ನು ಆಧರಿಸಿ ಮಂಜೂರು ಮಾಡಲಾಗುವುದು.
- 25 ಶ್ರವಣ ದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ಒಂದು ತರಬೇತಿ ಕೇಂದ್ರವನ್ನು ಅನುದಾನಕ್ಕೆ ಪರಿಗಣಿಸಲಾಗುವುದು. ಕನಿಷ್ಠ 15 ಶ್ರವಣ ದೋಷವುಳ್ಳ ಮಕ್ಕಳು ಹಾಗೂ ಅವರ ತಾಯಂದಿರಿದ್ದಲ್ಲಿ ಮಾತ್ರ ಈ ಸಹಾಯಧನ ನೀಡಲಾಗುವುದು.
- ಪ್ರತಿ ಮಗುವಿನ ತಾಯಿಗೆ ನೀಡಲಾಗುವ ಸಾರಿಗೆ ವೆಚ್ಚವನ್ನು ಸಂಸ್ಥೆಯು ವಾಹನ ಹೊಂದಿದಲ್ಲಿ ವಾಹನದ ನಿರ್ವಹಣೆಗೆ ಅಥವಾ ಬಾಡಿಗೆಗೆ ವಾಹನ ಪಡೆದು ವಾಹನದ ಬಾಡಿಗೆಗೆ ಸೂಕ್ತ ದಾಖಲೆಗಳನ್ನು ನಿರ್ವಹಿಸಿ ಉಪಯೋಗಿಸಿಕೊಂಡು ಫಲಾನುಭವಿಗಳಿಗೆ ಸಾರಿಗೆ ಸೌಲಭ್ಯ ಒದಗಿಸಬಹುದಾಗಿದೆ. ಇಲ್ಲದಿದ್ದಲ್ಲಿ ತಾಯಂದರಿಗೆ ನಿಗದಿಗೊಳಿಸಿರುವ ಸಾರಿಗೆ ವೆಚ್ಚವನ್ನು ಪ್ರತಿ ತಿಂಗಳೂ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಿದೆ. ಈ ಎಲ್ಲಾ ನಿರ್ವಹಣೆಗೆ ಸೂಕ್ತ ದಾಖಲೆಗಳನ್ನು ಸಂಸ್ಥೆಯು ನಿರ್ವಹಿಸತಕ್ಕದ್ದು.

- ಯೋಜನೆಯಡಿ ನೀಡುತ್ತಿರುವ ಸಾರಿಗೆ ವೆಚ್ಚದ ಅನುದಾನವನ್ನು ಸಂಸ್ಥೆಯು ವಾಹನ ಸೌಕರ್ಯವನ್ನು ಹೊಂದಿದಲ್ಲಿ ವಾಹನದ ನಿರ್ವಹಣೆ ಹಾಗೂ ಚಾಲಕರ ವೇತನಕ್ಕೆ ಬಳಸಿಕೊಳ್ಳಬಹುದಾಗಿದೆ. (10 ತಿಂಗಳ ಅವಧಿಗೆ ಮಾತ್ರ) ವಾಹನದ ಸೌಕರ್ಯವಿಲ್ಲದಿದ್ದಲ್ಲಿ ಫಲಾನುಭವಿಗೆ ನೇರವಾಗಿ ಅವರ ಸಾರಿಗೆಗಾಗಿ ಮೀಸಲಿಡುವುದು.
- ಯೋಜನೆಯಡಿ ನೀಡುತ್ತಿರುವ ಅನುದಾನದಲ್ಲಿ ಊಟ, ತಾಯಂದರಿಗೆ ನೀಡುವ ಪ್ರೋತ್ಸಾಹ ಧನ, ಸಾರಿಗೆ ವೆಚ್ಚವು ಸಂಸ್ಥೆಯಲ್ಲಿ ದಾಖಲಾಗಿರುವ ಫಲಾನುಭವಿಗಳನ್ನು ಆಧರಿಸಿ ನೀಡಲಾಗುವುದು.

## 9.ಸಹಾಯಧನ ಪರಾಮರ್ಶೆ:

ಸಹಾಯಧನವನ್ನು 5 ವರ್ಷಗಳಿಗೊಮ್ಮೆ ಸಹಾಯಧನದ ಮೊತ್ತವನ್ನು ಪರಾಮರ್ಶಿಸಲಾಗುವುದು.

## 10. ತರಬೇತಿ ಕೇಂದ್ರದಲ್ಲಿ ದಾಖಲಿಸುವಾಗ ಫಲಾನುಭವಿಗಳ ಅರ್ಹತೆ:

- 1 ರಿಂದ 4 ವರ್ಷದೊಳಗಿನ ಶ್ರವಣದೋಷವುಳ್ಳ ಮಕ್ಕಳನ್ನು ಅವರ ತಾಯಂದಿರ ಸಹಿತ ತರಬೇತಿಗೆ ಆಯ್ಕೆ ಮಾಡಿರಬೇಕು.
- ಮಗುವಿನ ವಯಸ್ಸಿನ ಬಗ್ಗೆ ದೃಢೀಕರಣ ಪ್ರಮಾಣ ಪತ್ರ ಒದಗಿಸಿರಬೇಕು. (ಜನನ ಪ್ರಮಾಣ ಪತ್ರ ಒದಗಿಸಿರಬೇಕು.
- ಬಡತನ ರೇಖೆಗಿಂತ ಕೆಳಗಿರುವ/ನಿರ್ಗತಿಕ ಕುಟುಂಬದ ಮಕ್ಕಳನ್ನು ಹಾಗು ಅವರ ತಾಯಂದಿರನ್ನು ಮಾತ್ರ ಅನುದಾನಕ್ಕೆ ಪರಿಗಣಿಸಲಾಗುವುದು. ಈ ಬಗ್ಗೆ ಸೂಕ್ತ ದಾಖಲೆ ಒದಗಿಸಿರಬೇಕು.
- ಮಗುವಿನ ಶ್ರವಣದೋಷದ ಬಗ್ಗೆ ವೈದ್ಯಕೀಯ ತಪಾಸಣಾ ವರದಿ ಹಾಗೂ ಅಂಗವಿಕಲತೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಒದಗಿಸಿರಬೇಕು.
- ಪೋಷಕರು ಆಧಾರ ಕಾರ್ಡ್ಗಳನ್ನು ಒದಗಿಸಬೇಕು.
- ಕನಿಷ್ಠ 5 ರಿಂದ 10 ವರ್ಷದಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು. ಈ ಬಗ್ಗೆ ವಾಸ ದೃಢೀಕರಣ ಪತ್ರ ಒದಗಿಸಿರಬೇಕು.

## 11.ತರಬೇತಿ ಕೇಂದ್ರದಲ್ಲಿ ಇರಬೇಕಾದ ಶಿಕ್ಷಕರ ಹಾಗು ಸಿಬ್ಬಂದಿಗಳ ವಿವರ:

- ತರಬೇತಿ ಕೇಂದ್ರದಲ್ಲಿ 25 ಶ್ರವಣ ದೋಷವುಳ್ಳ ಮಕ್ಕಳಿಗೆ ಇಬ್ಬರು ಶಿಕ್ಷಕರಿಗೆ ಅವಕಾಶ ನೀಡಲಾಗಿದೆ. ಇವರು ಪಿ.ಯು.ಸಿ.ಯೊಂದಿಗೆ ಶ್ರವಣದೋಷವುಳ್ಳ ಮಕ್ಕಳ ಬೋಧನೆಯಲ್ಲಿ (ವಿಶೇಷ ಶಿಕ್ಷಣ) ಡಿಪ್ಲೊಮಾ ತರಬೇತಿಯನ್ನು ಹೊಂದಿದವರಾಗಿರಬೇಕು.

- ಒಬ್ಬರು ವಾಕ್ ಮತ್ತು ಶ್ರವಣ ತಜ್ಞರನ್ನು ನೇಮಿಸಿಕೊಳ್ಳಬಹುದಾಗಿದೆ.

- ಒಬ್ಬರು ಸಮಾಲೋಚಕರನ್ನು ನೇಮಿಸಿಕೊಳ್ಳಬಹುದಾಗಿದೆ. ಇವರು ಮನ:ಶಾಸ್ತ್ರ ಅಥವಾ ಸಮಾಜ ಸೇವೆಯಲ್ಲಿ ಕನಿಷ್ಠ ಪದವಿಯನ್ನು ಹೊಂದಿರಬೇಕು.

- ಓರ್ವ ಆಯಾ ಹಾಗು ಓರ್ವ ಅಡಿಗೆಯವರನ್ನು ನೇಮಿಸಬಹುದಾಗಿದೆ. ಇವರ ಶೈಕ್ಷಣಿಕ ಅರ್ಹತೆಯು 7 ನೇ ತರಗತಿ ಉತ್ತೀರ್ಣ ಹೊಂದಿರಬೇಕಿರುತ್ತದೆ.

- ಅರೆಕಾಲಿಕ ವೈದ್ಯರನ್ನು ನೇಮಿಸಬಹುದಾಗಿದೆ. ಈ ಎಲ್ಲಾ ಸಿಬ್ಬಂದಿಗಳಿಗೆ ಅನುಬಂಧದಲ್ಲಿ ತಿಳಿಸಿರುವಂತೆ ಗೌರವಧನ ನೀಡಲು ಅವಕಾಶ ಕಲ್ಪಿಸಿದೆ.

12.ಬೋಧನಾ ಮಾಧ್ಯಮ:

ಶ್ರವಣದೋಷವುಳ್ಳ ಶಿಕ್ಷಕರ ತರಬೇತಿ ಕೇಂದ್ರದ ಬೋಧನ ಮಾಧ್ಯಮವು ಆದಷ್ಟು ಕನ್ನಡ ಭಾಷೆಯಲ್ಲಿ ಇರಬೇಕು

**13. ಪಠ್ಯ ವಸ್ತು:**

ಈ ತರಬೇತಿಗೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ದೃಡೀಕರಣ ಪಡೆದಂತಹ ಪಠ್ಯವಸ್ತುವನ್ನು ಅನುಸರಿಸಬಹುದಾಗಿದೆ.

14. ಸಂಸ್ಥೆಯು ನಿರ್ವಹಿಸಬೇಕಾದ ಲೆಕ್ಕ ಪತ್ರ ಮತ್ತಿತರ ದಾಖಲೆಗಳು:

- ತರಬೇತಿದಾರರ ಭಾವಚಿತ್ರ, ಹೊಂದಿರುವ ಹಾಗು ಇತರೆ ಮಾಹಿತಿಗಳನ್ನು ಒಳಗೊಂಡ ಅರ್ಜಿ, ವೈಯಕ್ತಿಕ ಕಡತಗಳು.
- ಮಕ್ಕಳ ದಾಖಲಾತಿ ವಹಿ
- ನಗದು ವಹಿ, ಲೆಡ್ಜರ್‌ಗಳು
- ಅನುದಾನದ ವಹಿ, ಸಾರ್ವಜನಿಕರಿಂದ ವಂತಿಗೆ ಸ್ವೀಕರಿಸುತ್ತಿದ್ದಲ್ಲಿ ರಶೀದಿ ಪುಸ್ತಕಗಳು.
- ಡೊನೇಶನ್ ರಿಜಿಸ್ಟರ್
- ಆಹಾರ ಸಾಮಗ್ರಿ ಮತ್ತು ದಾಸ್ತಾನು ವಿತರಣಾ ವಹಿ
- ಗೌರವಧನ ಬಟವಾಡೆ ವಹಿ
- ಸಾದಿಲ್ವಾರು ವೆಚ್ಚಗಳ ವಹಿ
- ದಾಸ್ತಾನು ವಹಿ (ಪಿಠೋಪಕರಣಗಳು ಮತ್ತು ಪಾಠೋಪಕರಣಗಳು)
- ಶ್ರವಣ ದೋಷವುಳ್ಳ ಮಕ್ಕಳ ಹಾಗು ತಾಯಂದಿರ ದಾಖಲಾತಿ ವಹಿ.
- ಶ್ರವಣ ದೋಷವುಳ್ಳ ಮಕ್ಕಳ ಹಾಗು ತಾಯಂದಿರ ಹಾಜರಾತಿ ವಹಿ
- ಸಿಬ್ಬಂದಿಗಳ ಹಾಜರಾತಿ ವಹಿ
- ಸಂಸ್ಥೆಯ ನೊಂದಣಿ ವಹಿ
- ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಹಿ
- ಸರ್ಕಾರದಿಂದ ನಮೂದಿಸಲ್ಪಡುವ ಇತರೆ ಅವಶ್ಯಕ ವಹಿಗಳು, ಆದೇಶ ಪತ್ರಗಳ ಕಡತಗಳು.

G. H. Saroja

(ಜಿ. ಹೆಚ್. ಸರೋಜಮ್ಮ)

ಸರ್ಕಾರ ಅಧೀನ ಕಾರ್ಯದರ್ಶಿ-2

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

## ಅನುಬಂಧ-01

ಶ್ರವಣ ದೋಷವುಳ್ಳ ಮಕ್ಕಳು ಹಾಗು ಅವರ ತಾಯಂದರ ತರಬೇತಿ ಕೇಂದ್ರಕ್ಕೆ ವಾರ್ಷಿಕವಾಗಿ ನೀಡಬಹುದಾದ ಸಹಾಯಧನದ ವಿವರ

ಮಕ್ಕಳ ಸಂಖ್ಯೆ:25.

| ಕ್ರ. ಸಂ | ಸಿಬ್ಬಂದಿಗಳ ವಿವರ | ಶೈಕ್ಷಣಿಕ ಅರ್ಹತೆ | ಸಿಬ್ಬಂದಿಗಳ/ ತರಬೇತಿ ದಾರರ ಸಂಖ್ಯೆ | ಮಾಸಿಕ ಗೌರವ ಧನ/ಮಾಹೆಯಾನ ವೆಚ್ಚ | ಒಟ್ಟು (ಲಕ್ಷಗಳಲ್ಲಿ) |
|---|---|---|---|---|---|
| | 1.ಆವರ್ತಕ ವೆಚ್ಚ | | | | |
| 1 | ವಾಕ್ ಮತ್ತು ಶ್ರವಣ ತಜ್ಞರು | ಸ್ಪೀಚ್ & ಹಿಯರಿಂಗ್ ವಿಷಯದಲ್ಲಿ ಬಿ.ಎಸ್ಸಿ/ಎಂ.ಎಸ್.ಸಿ ಪದವಿ | 1 | ರೂ.40000 | ರೂ.4,80,000 |
| 2 | ಸಮಾಲೋಚಕರು | ಎಂ.ಎ(ಮನೋವಿಜ್ಞಾನ)/ ಎಮ.ಎಸ್..ಡಬ್ಲ್ಯೂ ಪದವಿ | 1 | ರೂ.25000 | ರೂ.3,00,000 |
| 3 | ವಿಶೇಷ ಶಿಕ್ಷಕರು | ಪಿ.ಯುಸಿ.ಯೊಂದಿಗೆ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಣದಲ್ಲಿ ಡಿಪ್ಲೊಮಾ | 2 | ರೂ.20000 | ರೂ.4,80,000 |
| 4 | ಅರೆಕಾಲಿಕ ವೈದ್ಯರು (1) ವಾರಕ್ಕೆ 4 ಭೇಟಿ | ಎಮ್.ಬಿ.ಬಿ.ಎಸ್. (ಕಿವಿ, ಮೂಗು ಮತ್ತು ಗಂಟಲ ತಜ್ಞರಿಗೆ ಆದ್ಯತೆ) | 1 | ರೂ10000 | ರೂ.1,20,000 |
| 5 | ಅಡುಗೆಯವರು | 7 ನೇ ತರಗತಿ | 1 | ರೂ.9000 | ರೂ.1,08,000 |
| 6 | ಆಯಾ | 7 ನೇ ತರಗತಿ | 1 | ರೂ.8000 | ರೂ.96,000 |
| 7 | ಕಟ್ಟಡ ಬಾಡಿಗೆ | | | ರೂ.25000 | ರೂ.3,00,000 |
| 8 | ಊಟ ಮತ್ತು ಫಲಹಾರದ ವೆಚ್ಚ (25 ಮಕ್ಕಳು+25 ತಾಯಂದಿರು=50) (ರೂ.360*50*10) | | 50 | ರೂ.36000 | ರೂ.3,60,000 |
| 9 | ತಾಯಂದಿರಿಗೆ ಪ್ರೋತ್ಸಾಹಧನ /ಸ್ಟೈಫಂಡ್ (ರೂ.4000*25*10) | | 25 | ರೂ.105000 | ರೂ.10,00,000 |
| 10 | ಸಾದಿಲ್ವಾರು ವೆಚ್ಚ | | 12 | ರೂ2500 | ರೂ.31,000 |
| 11 | ಸಾರಿಗೆ ವೆಚ್ಚ (ರೂ.1000*10*25) | | 25 | ರೂ.1000 | ರೂ.2,25,000 |
| | 2.ಅನಾವರ್ತಕ ವೆಚ್ಚ | | | | |
| 1 | ಆಡಿಯೋಮೀಟರ್, ಸೈಲೆನ್ಸ್ ಕೊಠಡಿ ಹಾಗೂ ಇತರೆ ವ್ಯವಸ್ಥೆಗಾಗಿ(ಒಂದು ಬಾರಿ) | | | | ರೂ.5,00,000 |
| | (ಆವರ್ತಕ ವೆಚ್ಚ+.ಅನಾವರ್ತಕ ವೆಚ್ಚ ) = 1 ಘಟಕಕ್ಕೆ | | | | ರೂ.40,00,000 |
| | 4 ವಿಭಾಗಗಳ 8 ಘಟಕಗಳಿಗೆ | (4000000*8) | | ಒಟ್ಟು | ರೂ.3,20,00,00 |
| | ಒಟ್ಟು ರೂ. ಮೂರು ಕೋಟಿ ಇಪ್ಪತ್ತು ಲಕ್ಷಗಳು ಮಾತ್ರ. | | | | |

G. H. [signature]

ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಅನುಬಂಧ-02

ಶ್ರವಣ ದೋಷವುಳ್ಳ ಮಕ್ಕಳು ಹಾಗು ಅವರ ತಾಯಂದಿರ ವಾಕ್ ತರಬೇತಿ ಕೇಂದ್ರಕ್ಕೆ ಸಹಯಧನಕ್ಕಾಗಿ ಸಲ್ಲಿಸುವ ಅರ್ಜಿ ನಮೂನೆ

| | | |
|---|---|---|
| 1 | ಸಂಸ್ಥೆಯ ಹೆಸರು ಮತ್ತು ವಿಳಾಸ (ದೂರವಾಣಿ ಸಂಖ್ಯೆಯೊಂದಿಗೆ) | |
| 2 | ಸಂಸ್ಥೆಯು ಶಾಸನದಡಿ ನೊಂದಣಿ ಮಾಡಿರುವ ಸಂಖ್ಯೆ ಮತ್ತು ದಿನಾಂಕ ಸಂಸ್ಥೆಯು ಆಡಳಿತ ಮಂಡಳಿಯ ಪಟ್ಟಿ ಹಾಗೂ ನೊಂದಣಿ ಪ್ರಮಾಣ ಪತ್ರ ಟ್ರಸ್ಟ್ ಡೀಡ್ (ವಿವರವನ್ನು ಲಗತ್ತಿಸುವುದು). | |
| 3 | ಸಂಸ್ಥೆಯು ಅಂಗವಿಕಲರ ಹಕ್ಕುಗಳ ಅಧಿನಿಯಮ-2016ರಡಿ ಮಾಡಿರುವ ನೊಂದಣಿ ಸಂಖ್ಯೆ ಮತ್ತು ದಿನಾಂಕ | |
| 4 | ಸಂಸ್ಥೆಯು ಪ್ರಸ್ತುತ ಶ್ರವಣದೋಷವುಳ್ಳ ಮಕ್ಕಳಿಗೆ ನಡೆಸುತ್ತಿರುವ ಕಾರ್ಯಕ್ರಮಗಳ ವಿವರ; ಈ ಕಾರ್ಯಕ್ರಮಗಳಿಗೆ ಇಲಾಖೆಯಿಂದ ಅನುಮತಿ ಪಡೆದ ಆದೇಶದ ಸಂಖ್ಯೆ ಮತ್ತು ದಿನಾಂಕ;<br><br>ಸಂಸ್ಥೆಯು ಶ್ರವಣ ದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ ತರಬೇತಿ ಕೇಂದ್ರವನ್ನು ನಡೆಸುತ್ತಿದೆಯೇ?<br>ಹಾಗಿದ್ದಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಿದ ದಿನಾಂಕ ಮತ್ತು ವಿವರ | |
| 5 | ಸಂಸ್ಥೆಯು ಸ್ವಂತ ಕಟ್ಟಡ ಅಥವಾ ಬಾಡಿಗೆ ಕಟ್ಟಡವನ್ನು ಹೊಂದಿದೆಯೇ? ವಿವರವನ್ನು ನೀಡುವುದು. | |
| 6 | ಸಂಸ್ಥೆಯು ಪ್ರಸ್ತುತ ಶ್ರವಣದೋಷವುಳ್ಳ ಮಕ್ಕಳಿಗೆ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಕಟ್ಟಡದಲ್ಲಿರುವ ಸೌಲಭ್ಯ ಗಳ ವಿವರವನ್ನು ಒದಗಿಸುವುದು.<br><br>ಸಂಸ್ಥೆಯು ಶ್ರವಣ ದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ ತರಬೇತಿ ಕೇಂದ್ರವನ್ನು ನಡೆಸುತ್ತಿದ್ದಲ್ಲಿ ಕಟ್ಟಡದಲ್ಲಿರುವ ಸೌಲಭ್ಯಗಳ ವಿವರ ಒದಗಿಸುವುದು.<br><br>(ಸಂಪೂರ್ಣ ಕಟ್ಟಡದ ಛಾಯಾಚಿತ್ರವನ್ನು ಲಗತ್ತಿಸುವುದು)<br><br>ಕಟ್ಟಡದಲ್ಲಿ ತಡೆರಹಿತ ವಾತಾವರಣವನ್ನು ನಿರ್ಮಿಸಿರುವ ಬಗ್ಗೆ ವಿವರಣೆ ನೀಡುವುದು. | |

| | | |
|---|---|---|
| 7 | ಸಂಸ್ಥೆಯ ಕಟ್ಟಡದಲ್ಲಿ ಇರುವ ಕೊಠಡಿಗಳ ಸಂಖ್ಯೆ ಎಷ್ಟು?<br>ಶ್ರವಣದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ ತರಬೇತಿ ನೀಡಲು ಪ್ರತ್ಯೇಕ ಕೊಠಡಿಗಳ ವ್ಯವಸ್ಥೆ ಇದೆಯೇ?<br>ಪ್ರತಿ ಕೊಠಡಿಯಲ್ಲಿರುವ ಸ್ಥಳಾವಕಾಶ ನಮೂದಿಸುವುದು.<br>ಕೊಠಡಿಗಳಲ್ಲಿ ಗಾಳಿ ಬೆಳಕಿನ ವ್ಯವಸ್ಥೆ<br>ಕೊಠಡಿಗಳಲ್ಲಿ ಮಕ್ಕಳಿಗೆ ಒದಗಿಸಿರುವ ಪೀಠೋಪಕರಣ ವಿವರ.<br>ಕೊಠಡಿಗಳು ಅಂಗವಿಕಲ ಸ್ನೇಹಿ ಆಗಿದೆಯೇ ಎಂಬ ವಿವರ | |
| 8 | ಸಂಸ್ಥೆಯಲ್ಲಿ ಗ್ರಂಥಾಲಯ ಮತ್ತು ಇತರೆ ಚಟುವಟಿಕೆಗಳಿಗೆ ಕೊಠಡಿಗಳ ಲಭ್ಯವಿದಯೇ?<br>ಮಕ್ಕಳ ಚಟುವಟಿಕೆಗಳಿಗೆ ಸಹಾಯಕವಾಗುವ ಪುಸ್ತಕಗಳು, ಮ್ಯಾಪ್, ಸಿ.ಡಿ,ಕಂಪ್ಯೂಟರ್, ಟಿ.ವಿ. ಮಾಡೆಲ್‌ಗಳು, ಚಾರ್ಟ್ ಮುಂತಾದ ಪರಿಕರಗಳ ವಿವರ. | |
| 9 | ವಾಕ್ ತರಬೇತಿ ನೀಡಲು ಪ್ರತ್ಯೇಕ ಸೈಲೆನ್ಸ್ ಕೊಠಡಿಯ ವ್ಯವಸ್ಥೆ ಇದೆಯೇ?<br>ವಾಕ್ ಮತ್ತು ಶ್ರವಣ ತಜ್ಞರಿಗೆ ವಾಕ್ ತರಭೇತಿ ನೀಡಲು ಸೂಕ್ತ ವಾತಾವರಣವಿದೆಯೇ?<br>ಸಂಪನ್ಮೂಲ ಕೊಠಡಿ ವ್ಯವಸ್ಥೆ ಇದೆಯೇ? ಅವಶ್ಯಕ ಪರಿಕರಗಳು ಲಭ್ಯವಿದೆಯೇ? | |
| 10 | ಶೌಚಾಲಯಗಳು<br>➢ ಶೌಚಾಲಯಗಳ ಸಂಖ್ಯೆ<br>➢ ಗಂಡಸರಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ<br>➢ ಹೆಂಗಸರಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ<br>➢ ಶೌಚಾಲಯಗಳಿಗೆ ನೀರಿನ ವ್ಯವಸ್ಥೆ ಸಮರ್ಪಕವಾಗಿದಯೇ<br>ಅಂಗವಿಕಲ ಸ್ನೇಹಿಯಾಗಿದೆಯೇ | |
| 11 | ಸಂಸ್ಥೆಯು ಮಕ್ಕಳಿಗೆ ಮತ್ತು ಅವರ ತಾಯಂದಿರಿಗೆ ಹಾಗೂ ಇತರೆ ಸಿಬ್ಬಂದಿಗಳಿಗೆ ತರಬೇತಿ ಕೇಂದ್ರದಲ್ಲಿ ಒದಗಿಸಿರುವ ಇತರೆ ವ್ಯವಸ್ಥೆ<br>➢ ಕುಡಿಯುವ ನೀರಿನ ವ್ಯವಸ್ಥೆ<br>➢ ಸಾರಿಗೆ ವ್ಯವಸ್ಥೆ<br>➢ ತಡೆರಹಿತ ವಾತಾವರಣ<br>➢ ಅಡಿಗೆ ಮನೆಯ ವ್ಯವಸ್ಥೆ. | |
| 12 | ಸಂಸ್ಥೆಯಲ್ಲಿ ಪ್ರಸ್ತುತ ತರಬೇತಿಗಾಗಿ ಇರುವ ಮಕ್ಕಳ ಸಂಖ್ಯೆ | |
| 13 | ಸಂಸ್ಥೆಯಲ್ಲಿ ಅಗತ್ಯವಿರುವ ಕಲಿಕಾ ಹಾಗೂ ಬೋಧನಾ ಸಾಮಾಗ್ರಿಗಳ ವಿವರ(ವಿವರ ಪಟ್ಟಿ ಲಗತ್ತಿಸುವುದು) | |

| | | |
|---|---|---|
| 14 | ಸಿಬ್ಬಂದಿ ಸಂಖ್ಯೆ (ಸಂಪೂರ್ಣ ವಿವರ ಪಟ್ಟಿ ಲಗತ್ತಿಸುವುದು) | |
| | 1. ಅವಶ್ಯಕ ತರಬೇತಿ ಹೊಂದಿರುವ ಸಿಬ್ಬಂದಿ ಸಂಖ್ಯೆ | |
| | 2. ಶಿಕ್ಷಕೇತರರ ಸಂಖ್ಯೆ | |
| 15 | ಸಂಸ್ಥೆಯು ತನ್ನದೇ ಸ್ವಂತ ವಾಹನವನ್ನು ಹೊಂದಿದೆಯೇ? ವಿವರ | |
| 16 | ಸಂಸ್ಥೆಯ ಇತ್ತೀಚಿನ 02 ವರ್ಷಗಳ ಆಡಿಟ್ ವರದಿ | |
| 17 | ಸಂಸ್ಥೆಯ ಆರ್ಥಿಕ ಸಂಪನ್ಮೂಲ<br>ಸಂಸ್ಥೆಯು ಯಾವ ಮೂಲಗಳಿಂದ ಧನಸಹಾಯ ಪಡೆಯುತ್ತಿದೆ.<br>– ಸಂಸ್ಥೆಯು ಹೊರದೇಶಗಳಿಂದ ಈ ಕಾರ್ಯಕ್ರಮಕ್ಕೆ ಧನಸಹಾಯ ಪಡೆಯುತ್ತಿದೆಯೇ?<br>– ಸಂಸ್ಥೆಯು ರಾಜ್ಯ ; ಕೇಂದ್ರ ; ಸ್ಥಳೀಯ ಸಂಸ್ಥೆ ; ಇತರೆ ಖಾಸಗಿ ಸಂಸ್ಥೆಗಳಿಂದ ಅನುದಾನ ಪಡೆಯುತ್ತಿದೆಯೇ? | |
| 18 | ಸಂಸ್ಥೆಯ 02 ವರ್ಷಗಳ ವಾರ್ಷಿಕ ವರದಿ ಲಗತ್ತಿಸಿದೆಯೇ? | |
| 19 | ಸಂಸ್ಥೆಯು ಹೊಂದಿದ ಬ್ಯಾಂಕ್ ಖಾತೆ ವಿವರ | |
| 20 | ಸಂಸ್ಥೆಯು ಈ ಯೋಜನೆಯನ್ನು ಹೊರತುಪಡಿಸಿ ಬೇರೆ ಯಾವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮಗಳಿಗೆ ಯಾವ ಮೂಲಗಳಿಂದ ಧನಸಹಾಯ ಪಡೆಯಲಾಗುತ್ತಿದೆ. | |
| 21 | ಸಂಸ್ಥೆಯ ಇತರೆ ವಿಶೇಷ ಸಾಧನೆ | |
| 22 | ಸಂಸ್ಥೆಗೆ ರಾಜ್ಯ ಸರ್ಕಾರದಿಂದ ಕಾರಣಾಂತರದಿಂದ ಧನಸಹಾಯವು ಲಭ್ಯವಾಗದಿದ್ದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲದಿಂದ ತರಬೇತಿಯನ್ನು ನಡೆಸಲು ಶಕ್ತವಾಗಿದೆಯೇ? | |

G. H. S[illegible]

ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

## ಅನುಬಂಧ-03

### ಶ್ರವಣ ದೋಷವುಳ್ಳ ಮಕ್ಕಳು ಹಾಗು ಅವರ ತಾಯಂದಿರ ವಾಕ್ ತರಬೇತಿ ಕೇಂದ್ರಕ್ಕೆ ಅನುದಾನ ಶಿಫಾರಸ್ಸು ಮಾಡುವ ತನಿಖಾ ವರದಿ ನಮೂನೆ

| | | |
|---|---|---|
| 1 | ತನಿಖಾಧಿಕಾರಿಗಳ ಹೆಸರು ಮತ್ತು ಪದನಾಮ (ಜಂಟಿ ತನಿಖೆ ನಡೆಸಿದಲ್ಲಿ ತಂಡದ ಸದಸ್ಯರ ಹೆಸರು & ಪದನಾಮ) | |
| 2 | ತಪಾಸಣೆ ನಡೆಸಿದ ದಿನಾಂಕ | |
| 3 | ಸಂಸ್ಥೆಯ ಹೆಸರು ಮತ್ತು ವಿವರ (ದೂರವಾಣಿ ಸಂಖ್ಯೆಯೊಂದಿಗೆ) | |
| 4 | ಸಂಸ್ಥೆಯು ಶಾಸನವಡಿ ನೊಂದಣಿ ಮಾಡಿಸಿದೆಯೇ?<br>ಅ. ನೊಂದಣಿ ಸಂಖ್ಯೆ ಮತ್ತು ದಿನಾಂಕ ನಮೂದಿಸುವುದು<br>ಆ. ಸಂಸ್ಥೆಯು ಆಡಳಿತ ಮಂಡಳಿಯ ಪಟ್ಟಿ ಹಾಗೂ ನೊಂದಣಿ ಪ್ರಮಾಣ ಪತ್ರ ಟ್ರಸ್ಟ್‌ಡೀಡ್ ವಿವರವನ್ನು ಲಗತ್ತಿಸುವುದು. | |
| 5 | ಸಂಸ್ಥೆಯು ಅಂಗವಿಕಲರ ಹಕ್ಕುಗಳ ಅಧಿನಿಯಮ 2016ರಡಿ ಮಾಡಿರುವ ನೊಂದಣಿ ಆಗಿದೆಯೇ?<br>ನೊಂದಣಿ ಸಂಖ್ಯೆ & ದಿನಾಂಕ (ಆದೇಶದ ಪ್ರತಿ ಲಗತ್ತಿಸುವುದು.) | |
| 6 | ಸಂಸ್ಥೆಯು ಶ್ರವಣ ದೋಷವುಳ್ಳ ಮಕ್ಕಳು ಹಾಗು ಅವರ ತಾಯಂದಿರ ವಾಕ್ ತರಬೇತಿ ಕೇಂದ್ರವನ್ನು ನಡೆಸುತ್ತಿದೆಯೇ? ನಡೆಸುತ್ತಿದ್ದಲ್ಲಿ ವಿವರ ನೀಡುವುದು. | |
| 7 | ಸಂಸ್ಥೆಯು ಸ್ವಂತ ಕಟ್ಟಡ / ನಿವೇಶನವನ್ನು ಹೊಂದಿದೆಯೇ? ವಿವರವನ್ನು ನೀಡುವುದು. | |
| 8 | ಸಂಸ್ಥೆಯು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಲ್ಲಿ ಈ ಬಗ್ಗೆ ವಿವರ | |
| 9 | ಸಂಸ್ಥೆಯು ಪ್ರಸ್ತುತ 'ಶ್ರವಣದೋಷವುಳ್ಳ ಮಕ್ಕಳಿಗೆ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಕಟ್ಟಡದಲ್ಲಿರುವ ಸೌಲಭ್ಯಗಳ ವಿವರವನ್ನು ಒದಗಿಸುವುದು.<br><br>ಸಂಸ್ಥೆಯು ಶ್ರವಣ ದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ ತರಬೇತಿ ಕೇಂದ್ರವನ್ನು ನಡೆಸುತ್ತಿದ್ದಲ್ಲಿ ಕಟ್ಟಡದಲ್ಲಿರುವ ಸೌಲಭ್ಯಗಳ ವಿವರ ಒದಗಿಸುವುದು.<br>(ಸಂಪೂರ್ಣ ಕಟ್ಟಡದ ಛಾಯಾ ಚಿತ್ರವನ್ನು ಲಗತ್ತಿಸುವುದು)<br>ಕಟ್ಟಡದಲ್ಲಿ ತಡೆರಹಿತ ವಾತಾವರಣವನ್ನು ನಿರ್ಮಿಸಿರುವ ಬಗ್ಗೆ ವಿವರಣೆ ನೀಡುವುದು. | |

| | | |
|---|---|---|
| 10 | ಸಂಸ್ಥೆಯ ಕಟ್ಟಡದಲ್ಲಿ ಇರುವ ಕೊಠಡಿಗಳ ಸಂಖ್ಯೆ ಎಷ್ಟು?<br>ಶ್ರವಣ ದೋಷವುಳ್ಳ ಮಕ್ಕಳಿಗೆ ಅವರ ತಾಯಂದಿರ ಸಹಿತ ವಾಕ್ ತರಬೇತಿ ನೀಡಲು ಪ್ರತ್ಯೇಕ ಕೊಠಡಿಗಳ ವ್ಯವಸ್ಥೆ ಇದೆಯೇ?<br>ಪ್ರತಿ ಕೊಠಡಿಯಲ್ಲಿರುವ ಸ್ಥಳಾವಕಾಶ ನಮೂದಿಸುವುದು.<br>ಕೊಠಡಿಗಳಲ್ಲಿ ಗಾಳಿ ಬೆಳಕಿನ ವ್ಯವಸ್ಥೆ<br>ಕೊಠಡಿಗಳಲ್ಲಿ ಮಕ್ಕಳಿಗೆ ಒದಗಿಸಿರುವ ಪೀಠೋಪಕರಣ ವಿವರ.<br>ಕೊಠಡಿಗಳು ಅಂಗವಿಕಲ ಸ್ನೇಹಿ ಆಗಿದೆಯೇ ಎಂಬ ವಿವರ | |
| 11 | ಸಂಸ್ಥೆಯಲ್ಲಿ ಗ್ರಂಥಾಲಯ ಮತ್ತು ಇತರೆ ಚಟುವಟಿಕೆಗಳಿಗೆ ಕೊಠಡಿಗಳ ಲಭ್ಯವಿದೆಯೇ?<br>ಮಕ್ಕಳ ಚಟುವಟಿಕೆಗಳಿಗೆ ಸಹಾಯಕವಾಗುವ ಪುಸ್ತಕಗಳು, ಮ್ಯಾಪ್, ಸಿ.ಡಿ,ಕಂಪ್ಯೂಟರ್, ಟಿ.ವಿ. ಮಾಡೆಲ್‌ಗಳು, ಚಾರ್ಟ್ ಮುಂತಾದ ಪರಿಕರಗಳ ವಿವರ. | |
| 12 | ವಾಕ್ ತರಬೇತಿ ನೀಡಲು ಪ್ರತ್ಯೇಕ ಸೈಲೆನ್ಸ್ ಕೊಠಡಿಯ ವ್ಯವಸ್ಥೆ ಇದೆಯೇ?<br>ವಾಕ್ ಮತ್ತು ಶ್ರವಣ ತಜ್ಞರಿಗೆ ವಾಕ್ ತರಬೇತಿ ನೀಡಲು ಸೂಕ್ತ ವಾತಾವರಣವಿದೆಯೇ?<br>ಸಂಪನ್ಮೂಲ ಕೊಠಡಿ ವ್ಯವಸ್ಥೆ ಇದೆಯೇ? ಅವಶ್ಯಕ ಪರಿಕರಗಳು ಲಭ್ಯವಿದೆಯೇ? | |
| 13 | ಶೌಚಾಲಯಗಳು<br>➢ ಶೌಚಾಲಯಗಳ ಸಂಖ್ಯೆ<br>➢ ಗಂಡಸರಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ<br>➢ ಹೆಂಗಸರಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ<br>➢ ಶೌಚಾಲಯಗಳಿಗೆ ನೀರಿನ ವ್ಯವಸ್ಥೆ ಸಮರ್ಪಕವಾಗಿದಯೇ<br>ಅಂಗವಿಕಲ ಸ್ನೇಹಿಯಾಗಿದಯೇ | |
| 14 | ಸಂಸ್ಥೆಯು ಮಕ್ಕಳಿಗೆ ಮತ್ತು ಅವರ ತಾಯಂದಿರಿಗೆ ಹಾಗೂ ಇತರೆ ಸಿಬ್ಬಂದಿಗಳಿಗೆ ತರಬೇತಿ ಕೇಂದ್ರದಲ್ಲಿ ಒದಗಿಸಿರುವ ಇತರೆ ವ್ಯವಸ್ಥೆ<br>➢ ಕುಡಿಯುವ ನೀರಿನ ವ್ಯವಸ್ಥೆ<br>➢ ಸಾರಿಗೆ ವ್ಯವಸ್ಥೆ<br>➢ ತಡೆರಹಿತ ವಾತಾವರಣ<br>➢ ಅಡಿಗೆ ಮನೆಯ ವ್ಯವಸ್ಥೆ. | |
| 15 | ಸಂಸ್ಥೆಯಲ್ಲಿ ಪ್ರಸ್ತುತ ತರಬೇತಿಗಾಗಿ ಇರುವ ಮಕ್ಕಳ ಸಂಖ್ಯೆ;<br>ಯೋಜನೆಯನುಸಾರ ಮಕ್ಕಳನ್ನು ದಾಖಲಿಸಲಾಗಿದೆಯೇ | |

| | | |
|---|---|---|
| 16 | ಕೇಂದ್ರಕ್ಕೆ ದಾಖಲಾಗಿರುವ ಒಟ್ಟು ಮಕ್ಕಳ ಸಂಖ್ಯೆ 4ರ ಅನುಬಂಧದಲ್ಲಿ ತಿಳಿಸಿರುವಂತೆ ವಿವರ ನೀಡುವುದು | |
| 17 | ಕೇಂದ್ರಕ್ಕೆ ಯಾವ ವಯಸ್ಸಿನ ಮಕ್ಕಳನ್ನು ದಾಖಲಿಸಲಾಗುತ್ತಿದೆ<br>➢ ದಾಖಲಾತಿಗೆ ಯೋಜನೆಯನುಸಾರ ಮಾರ್ಗಸೂಚಿಯನ್ನು ಅನುಸರಿಸಲಾಗಿದೆಯೇ?<br>➢ ಮಕ್ಕಳನ್ನು ದಾಖಲಿಸುವಾಗ ಭಾವಚಿತ್ರವನ್ನು ಪಡೆದು ದಾಖಲಿಸಲಾಗಿದೆಯೇ<br>➢ ದಾಖಲಾತಿ ಸಮಯದಲ್ಲಿ ಎಲ್ಲಾ ಜಾತಿ/ಪಂಗಡಗಳನ್ನು ಪರಿಗಣಿಸಲಾಗುತ್ತಿದೆಯೇ?<br>➢ ದಾಖಲಾತಿ ಸಮಯದಲ್ಲಿ ಅಂಗವಿಕಲರ ಪ್ರಮಾಣ ಪತ್ರ ಪಡೆಯಲಾಗುತ್ತಿದೆಯೇ<br>➢ ಮಕ್ಕಳ ವೈಯಕ್ತಿಕ ಕಡತ ನಿರ್ವಹಿಸಲಾಗುತ್ತಿದೆಯೇ? | |
| 18 | ಸಂಸ್ಥೆಯಲ್ಲಿ ಅಗತ್ಯವಿರುವ ಕೆಳಕಂಡ ದಾಖಲೆ/ವಹಿಗಳನ್ನು ನಿರ್ವಹಿಸಲಾಗಿದೆಯೇ/ ಪರಿಶೀಲಿಸಿ ವಿವರ ನೀಡುವುದು.<br>1. ಮಕ್ಕಳ ದಾಖಲಾತಿ ವಹಿ<br>2. ನಗದು ವಹಿ, ಲೆಡ್ಜರ್‌ಗಳು<br>3. ಅನುದಾನದ ವಹಿ, ಸಾರ್ವಜನಿಕರಿಂದ ವಂತಿಗೆ ಸ್ವೀಕರಿಸುತ್ತಿದ್ದಲ್ಲಿ ರಶೀದಿ ಪುಸ್ತಕಗಳು.<br>4. ಡೊನೇಶನ್ ರಿಜಿಸ್ಟರ್<br>5. ಆಹಾರ ಸಾಮಗ್ರಿ ಮತ್ತು ದಾಸ್ತಾನು ವಿತರಣಾ ವಹಿ<br>6. ಗೌರವಧನ ಬಟವಾಡೆ ವಹಿ<br>7. ಸಾದಿಲ್ವಾರು ವೆಚ್ಚಗಳ ವಹಿ<br>8. ದಾಸ್ತಾನು ವಹಿ (ಪಿಠೋಪಕರಣಗಳು ಮತ್ತು ಪಾಠೋಪಕರಣಗಳು)<br>9. ಶ್ರವಣ ದೋಷವುಳ್ಳ ಮಕ್ಕಳ ಹಾಗು ತಾಯಂದಿರ ದಾಖಲಾತಿ ವಹಿ.<br>10. ಶ್ರವಣ ದೋಷವುಳ್ಳ ಮಕ್ಕಳ ಹಾಗು ತಾಯಂದಿರ ಹಾಜರಾತಿ ವಹಿ<br>11. ಸಿಬ್ಬಂದಿಗಳ ಹಾಜರಾತಿ ವಹಿ<br>12. ಸಂಸ್ಥೆಯ ನೊಂದಣಿ ವಹಿ<br>13. ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಹಿ<br>14. ಸರ್ಕಾರದಿಂದ ನಮೂದಿಸಲ್ಪಡುವ ಇತರೆ ಅವಶ್ಯಕ ವಹಿಗಳು, ಆದೇಶ ಪತ್ರಗಳು/ ಕಡತಗಳು. | |
| 19 | ಸಂಸ್ಥೆಯಲ್ಲಿ ಅಗತ್ಯವಿರುವ ಕಲಿಕಾ ಹಾಗೂ ಬೋಧನಾ ಸಮಾಗ್ರಿಗಳ ವಿವರ (ವಿವರಪಟ್ಟಿ ಲಗತ್ತಿಸುವುದು) | |
| 20 | ಸಿಬ್ಬಂದಿ ಸಂಖ್ಯೆ (ಸಂಪೂರ್ಣ ವಿವರ ಪಟ್ಟಿ ಲಗತ್ತಿಸುವುದು) | |
| | ಅವಶ್ಯಕ ತರಬೇತಿ ಹೊಂದಿರುವ ಸಿಬ್ಬಂದಿ ಸಂಖ್ಯೆ, ಯೋಜನೆಯಾನುಸಾರ ಇದೆಯೇ | |
| | ಶಿಕ್ಷಕೇತರರ ಸಂಖ್ಯೆ, ಯೋಜನೆಯಾನುಸಾರ ಇದೆಯೇ | |

| | | |
|---|---|---|
| 21 | ಸಂಸ್ಥೆಯು ತನ್ನದೇ ಸ್ವಂತ ವಾಹನವನ್ನು ಹೊಂದಿದೆಯೇ? ವಿವರ | |
| 22 | ಸಂಸ್ಥೆಯ ಇತ್ತೀಚಿನ 02 ವರ್ಷಗಳ ಆಡಿಟ್ ವರದಿ ಸಲ್ಲಿಸಿದೆಯೇ? | |
| 23 | ಸಂಸ್ಥೆಯು ಆರ್ಥಿಕ ದೃಢತೆಯ ಬಗ್ಗೆ ಪರಿಶೀಲಿಸಲಾಗಿದೆಯೇ ವಿವರಣೆ ನೀಡುವುದು;<br>ಅ. ಸಂಸ್ಥೆಯು ಯಾವ ಮೂಲಗಳಿಂದ ಧನಸಹಾಯ ಪಡೆಯುತ್ತಿದೆ<br>ಆ. ಸಂಸ್ಥೆಯು ರಾಜ್ಯ ; ಕೇಂದ್ರ ; ಸ್ಥಳೀಯ ಸಂಸ್ಥೆ ; ಇತರೆ ಖಾಸಗಿ ಸಂಸ್ಥೆಗಳಿಂದ ಅನುದಾನ ಪಡೆಯುತ್ತಿದೆಯೇ?<br>ಇ. ಸಂಸ್ಥೆಯು ನಡೆಸುತ್ತಿರುವ ಇತರೆ ಮುಖ್ಯ ಕಾರ್ಯಕ್ರಮಗಳ ವಿವರ | |
| 24 | ಸಂಸ್ಥೆಯು ಕೇಂದ್ರವನ್ನು ಉತ್ತಮ ರೀತಿಯಲ್ಲಿ ನಡೆಸುವಲ್ಲಿ ಯಾವ ಯಾವ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರುತ್ತದೆ & ಯಾವ ರೀತಿಯ ಸಹಾಯವನ್ನು ಪಡೆಯುತ್ತಿದೆ. | |
| 25 | ತಪಾಸಣಾ ವೇಳೆಯಲ್ಲಿ ಸಂಸ್ಥೆಯ ಆರ್ಥಿಕ ಸ್ಥಿತಿ | |
| 26 | ಸಂಸ್ಥೆಯ 02 ವರ್ಷಗಳ ವಾರ್ಷಿಕ ವರದಿ ಲಗತ್ತಿಸಿದೆಯೇ? | |
| 27 | ಸಂಸ್ಥೆಯು ಹೊಂದಿರುವ ಬ್ಯಾಂಕ್ ಖಾತೆ ವಿವರ? ಯಾರ ಹೆಸರಿನಲ್ಲಿ ಹೊಂದಿದೆ. | |
| 28 | ಸಂಸ್ಥೆಯು ಈ ಯೋಜನೆಯನ್ನು ಹೊರತುಪಡಿಸಿ ಬೇರೆ ಯಾವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ?. ಈ ಕಾರ್ಯಕ್ರಮಗಳಿಗೆ ಯಾವ ಮೂಲಗಳಿಂದ ಧನಸಹಾಯ ಪಡೆಯಲಾಗುತ್ತಿದೆ. | |
| 29 | ಸಂಸ್ಥೆಯ ಇತರೆ ವಿಶೇಷ ಸಾಧನೆ | |
| 30 | ಸಂಸ್ಥೆಗೆ ರಾಜ್ಯ ಸರ್ಕಾರದಿಂದ ಕಾರಣಾಂತರದಿಂದ ಧನಸಹಾಯವು ಲಭ್ಯವಾಗದಿದ್ದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲದಿಂದ ತರಬೇತಿಯನ್ನು ನಡೆಸಲು ಶಕ್ತವಾಗಿದೆಯೇ? ಈ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡುವುದು. | |
| 31 | ತಪಾಸಣಾ ವೇಳೆಯಲ್ಲಿ ಸಂಸ್ಥೆಯ ಕಾರ್ಯ ನಿರ್ವಹಣೆ ಬಗ್ಗೆ ಗಮನಿಸಲಾದ ಮುಖ್ಯ ಅಂಶಗಳು | |
| 32 | ಸಂಸ್ಥೆಯ ಕಾರ್ಯನಿರ್ವಹಣೆಯನ್ನು ಇನ್ನೂ ಉತ್ತಮಗೊಳಿಸುವ ಬಗ್ಗೆ ನೀಡಬಹುದಾದ ಸಲಹೆಗಳು | |

| | | |
|---|---|---|
| 33 | ಸಂಸ್ಥೆಯು ನಡೆಸುತ್ತಿರುವ ತರಬೇತಿ ಅಥವಾ ತರಬೇತಿ ನಡೆಸಲು ಸರ್ಕಾರದಿಂದ ಅನುದಾನ ಒದಗಿಸುವ ಬಗ್ಗೆ ಅನುದಾನ ನೀಡುವ ಬಗ್ಗೆ ತನಿಖಾಧಿಕಾರಿಗಳ ಸ್ಪಷ್ಟ ಅಭಿಪ್ರಾಯ ನೀಡುವುದು.<br>ಯೋಜನೆಯು ಅನುಸಾರ ಶಿಫಾರಸ್ಸು ಮಾಡಬಹುದಾದ ಅನುದಾನ ಐಟಂವಾರು ವಿವರ ಒದಗಿಸುವುದು. ಪ್ರಸ್ತಾವನೆಯನ್ನು ಜಿಲ್ಲಾ ಸಮಿತಿಯ ಅನುಮೋದನೆಯೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು. | |

G. H. Sangam

ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

## ಅನುಬಂಧ-04

### ಶ್ರವಣದೋಷವುಳ್ಳ ಮಕ್ಕಳಿಗೆ ತಾಯಂದಿರ ಸಹಿತ ವಾಕ್ ತರಬೇತಿ ಕೇಂದ್ರದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ : ಶಿಕ್ಷಕೇತರ ನೌಕರರ ವಿವರ

| ಕ್ರ ಸಂ | ನೌಕರರ ಹೆಸರು & ಪದನಾಮ | ಜನ್ಮ ದಿನಾಂಕ | ನೇಮಕಾತಿ ದಿನಾಂಕ | ಶೈಕ್ಷಣಿಕ ಅರ್ಹತೆ | ಜಾತಿ/ ಧರ್ಮ/ಪಂಗಡ | ಆಧಾರ್ ಕಾರ್ಡ್‌ಸಂಖ್ಯೆ |
|---|---|---|---|---|---|---|
| | | | | | | |
| | | | | | | |

G. H. Sargian

ಸರ್ಕಾರದ ಅಧೀನ ಕಾರ್ಯದರ್ಶಿ-2
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ**

ಅನುಬಂಧ-05

ಶ್ರವಣದೋಷವುಳ್ಳ ಮಕ್ಕಳಿಗೆ ತಾಯಂದಿರ ಸಹಿತ ವಾಕ್ ತರಬೇತಿ ಕೇಂದ್ರದಲ್ಲಿ ದಾಖಲಾಗಿರುವ ಶ್ರವಣ ದೋಷವುಳ್ಳ ಮಕ್ಕಳ ವಿವರ

| ಕ್ರ. ಸಂ | ಶ್ರ..ದೋ. ಮಕ್ಕಳ ಹೆಸರು & ವಿಳಾಸ | ತಾಯಿಯ ಹೆಸರು ವಿಳಾಸ | ಜನ್ಮ ದಿನಾಂಕ ಮತ್ತು ವಯಸ್ಸು | ದಾಖಲಾತಿ ದಿನಾಂಕ ಮತ್ತು ಸಂಖ್ಯೆ | ಜಾತಿ/ ಧರ್ಮ/ಪಂಗಡ | ಅಂಗವಿಕಲತೆ ವಿವರ & ಶೇಕಡವಾರು ಪ್ರಮಾಣ | ಜನ್ಮ ದಿನಾಂಕ ಮತ್ತು ವಯಸ್ಸು |
|---|---|---|---|---|---|---|---|
| | | | | | | | |
| | | | | | | | |

G. H. Sangama

ಸರ್ಕಾರದ ಅಧೀನ ಕಾರ್ಯದರ್ಶಿ-2
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ**

## ಅನುಬಂಧ–06

### ಶ್ರವಣದೋಷವುಳ್ಳ ಮಕ್ಕಳಿಗೆ ತಾಯಂದಿರ ಸಹಿತ ವಾಕ್ ತರಬೇತಿ ಕೇಂದ್ರದಲ್ಲಿ ದಾಖಲಾಗಿರುವ ಶ್ರವಣ ದೋಷವುಳ್ಳ ಮಕ್ಕಳ ತಾಯಂದಿರ ವಿವರ

| ಕ್ರ ಸಂ | ದಾಖಲಾಗಿರುವ ಶ್ರವಣ ದೋಷವುಳ್ಳ ಮಕ್ಕಳ ತಾಯಿಯ ಹೆಸರು & ವಿಳಾಸ | ಶ್ರವಣ ದೋಷವುಳ್ಳ ಮಗುವಿನ ಹೆಸರು ವಿಳಾಸ | ದಾಖಲಾತಿ ದಿನಾಂಕ ಮತ್ತು ಸಂಖ್ಯೆ | ಜಾತಿ/ ಧರ್ಮ/ಪಂಗಡ | ಆಧಾರ್ ಕಾರ್ಡ್‌ಸಂಖ್ಯೆ | ಬಿ.ಪಿ.ಎಲ್ ಕಾರ್ಡ್/ಆದಾಯ ಪ್ರಮಾಣ ಪತ್ರದ ಸಂಖ್ಯೆ | ವಾಸದ ಬಗ್ಗೆ ದೃಡೀಕರಣ ಪತ್ರ |
|---|---|---|---|---|---|---|---|
| | | | | | | | |
| | | | | | | | |

G. H. Sarojamma
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ